ತಕ್ಕ ವ್ಯವಸ್ಥೆ ಮಾಡುತ್ತೀರಾ ? ಮಾನ್ಯ ಮಂತ್ರಿಗಳು 13 ಸಾವಿರ ಹುದ್ದೆಗಳನ್ನು ಭರ್ತಿ ಮಾಡತಕ್ಕ ವಿಚಾರ ಸರ್ಕಾರದ ಗಮನದಲ್ಲಿದೆ ಎಂದು ಹೇಳಿದರು. ಈ ವರ್ಷ ಶಾಲೆಗಳು ಪ್ರಾರಂಭವಾಗುವಾಗ ಆ ಶಿಕ್ಷಕರನ್ನು ಭರ್ತಿಮಾಡುತ್ತೀರಾ, ಹಾಗಿದ್ದರೆ. ಯಾವಾಗ ಮಾಡುತ್ತೀರಿ ಮತ್ತು ಯಾವ ಪದ್ಧತಿಯಿಂದ ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ :— 13 ಸಾವಿರ ಏಕೋಪಾಧ್ಯಾಯ ಶಾಲೆಗಳಲ್ಲಿ ಖಾಲಿ ಇವೆ ಎಂದು ಹೇಳಲಿಲ್ಲ. ಏಕೋಪಾಧ್ಯಾಯರು ಇರತಕ್ಕ ಪಾಠಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ ಇದ್ದರೆ ಅದಕ್ಕೆ ಬೇಕಾಗಿರತಕ್ಕ ಉಪಾಧ್ಯಾಯರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಸಾಧ್ಯವಾದಷ್ಟು ಏಕೋಪಾಧ್ಯಾಯ ಪಾಠಶಾಲೆಗಳನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲದೆ ಸ್ಥಳೀಯ ಅಭ್ಯರ್ಥಿಗಳಾಗಿ ಇವತ್ತು ಕೆಲಸ ಮಾಡತಕ್ಕವರಿಗೂ ಅಭ್ಯರ್ಥಿಗಳನ್ನು ಚುನಾಯಿಸುವಂಥ ಸಮಿತಿ ಮುಂದೆ ಹೋಗುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ. ಕರೆದಾಗ ಅವರು ಅರ್ಜಿಗಳನ್ನು ಹಾಕಿಕೊಳ್ಳಬೇಕು. ಅನುಭವದ ಮೇಲೆ ಸಮಿತಿಯವರು ಅಭ್ಯರ್ಥಿಗಳನ್ನು ತೆಗೆದುಕೊಳ್ಳುತ್ತಾರೆ ಎನ್ನತಕ್ಕ ಭರವಸೆ ನಮಗೆ ಇದೆ.

ಶ್ರೀ ಕೆ. ಎಸ್. ನಾಗರತ್ನಮ್ಮ :— ಬಹುತೇಕ ಏಕೋಪಾಧ್ಯಾಯ ಶಾಲೆಗಳಲ್ಲಿ ಅದೇ ಊರಿನವರೇ ಅಲ್ಲಿ ಟೀಚರ್ ಆಗಿರುವುದರಿಂದ ಅವರು ಶಾಲೆಗೆ ಹೋಗದೇ ಇದ್ದರೆ, ಆ ಶಾಲೆಯಲ್ಲಿ ಉಪಾಧ್ಯಾಯರು ಇದ್ದಾರೆಂದು ಭಾವಿಸಿದ್ದೀರಾ ಅಥವಾ ಇಲ್ಲ ಎಂದು ಭಾವಿಸಿದ್ದೀರಾ ?

ಶ್ರೀ ಬಿ ರಾಚಯ್ಯ :— ಹಿಂದೆ ಎಲ್ಲಾ ಪ್ರಾಥಮಿಕ ಶಾಲಾ ಉಪಾಧ್ಯಾಯರು ಬಹಳ ಕಡಿಮೆ ಸಂಬಳ ತೆಗೆದುಕೊಳ್ಳುತ್ತಾ ಇದ್ದರು. ಅವರನ್ನು ಆ ಊರಿನಿಂದ ಮತ್ತೊಂದು ಊರಿಗೆ ವರ್ಗಾಯಿಸಿದರೆ ಅವರಿಗೆ ಹೆಂಡತಿ ಮಕ್ಕಳು ಇರುತ್ತಾರೆ, ತೊಂದರೆಯಾಗುತ್ತದೆ ಎಂಬ ಕನಿಕರದಿಂದ ಹತ್ತಿರದಲ್ಲೇ ಇಡಬೇಕು ಎಂದು ಮೊದಲು ಸರ್ಕಾರದ ರೀತಿಇತ್ತು; ಆಯಾ ತಾಲ್ಲೂಕಿನಲ್ಲೇ ಅವರು ಇರಲಿ ಎಂದು ಮಾಡಿದ್ದರು. ಆ ಊರಿನಲ್ಲೇ ಇದ್ದರೆ ಹೆಂಡತಿ ಮಕ್ಕಳ ತಾಪತ್ರಯವಿಲ್ಲವೆ ಮನೆ ಕೆಲಸ ನೋಡಿಕೊಂಡು ಪಾಠಶಾಲೆಯನ್ನೂ ನಡೆಸಲಿ ಎನ್ನುವ ಉದ್ದೇಶದಿಂದ ಮಾಡಲಾಗಿತ್ತು. ಈ ಬಗ್ಗೆ ಅನೇಕ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆ. ಆ ರೀತಿ ಮಾಡುವವರನ್ನು ದೂರ ಹಾಕುವುದಕ್ಕೆ ಪ್ರಯತ್ನ ಮಾಡಿದಾಗ ತಾವೆಲ್ಲಾ ಸಹಕರಿಸುವುದಕ್ಕೆ ಪ್ರಯತ್ನ ಮಾಡಬೇಕು.

ಧಾರವಾಡ ಸರ್ಕಾರಿ ಹಾಲಿನ ಡೈರಿಯ ಹಾಲಿನ ವ್ಯವಹಾರ

118. ಶ್ರೀ ಎಂ. ಜಿ. ಜರತಾರಗರ (ಹುಬ್ಬಳ್ಳಿ).- ಮಾನ್ಯ ಪಶು ಸಾಂಗೋಪನಾ, ಪಶುವೈದ್ಯ, ಹಾಗೂ ತೋಟಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ;

ಅ) ಹುಬ್ಬಳ್ಳಿ ಧಾರವಾಡ ಮಧ್ಯದಲ್ಲಿರುವ ರಾಯಪೂರ ಡೈರಿ ಸರಬರಾಜಿಗೆ ಹಾಲು ತರುವುದು ಹಾಗೂ ವಿತರಣೆ ಮಾಡುವ ಬಗೆ ಈಗಿದ್ದ ಅಧಿಕಾರಿಗಳ ಸಂಖ್ಯೆ ಎಷ್ಟು ? ಹಾಗೂ ದಿನನಿತ್ಯದ ಹಾಲಿನ ಲೀಟರಿನ ಪ್ರಮಾಣವೆಷ್ಟು ?

ಆ) ಮೇಲ್ಕಂಡ ಹಾಲಿನ ಡೇರಿಗೆ 1979 ರಿಂದ 1982 ರವರೆಗೆ ಪ್ರತಿವರ್ಷ ಲಾರಿ ಕಂಟ್ರಾಕ್ಟರಿಗೆ ಕೊಟ್ಟ ಬಾಡಿಗೆ ಹಣದ ಮೊತ್ತವೆಷ್ಟು (ವಿವರ ತಿಳಿಯ ಪಡಿಸುವಿರಾ)

ಇ) ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಂಟ್ರಾಕ್ಟರಿಗೆ ಬಾಡಿಗೆ ಕೊಡುವ ಬದಲು ವಾಹನಗಳನ್ನು ಖರೀದಿಸಿ ಡೇರಿಗೆ ಉಳಿತಾಯ ಮಾಡದಿರಲು ಕಾರಣಗಳೇನು ?

ಈ) ಮೇಲ್ಕಂಡ ಡೇರಿಗೆ ಉಳಿತಾಯದ ಬದಲು ಆರ್ಥಿಕ ಹೊಣೆ ಹೆಚ್ಚಾಗಿರುವುದು ನಿಜವೇ ?

ಶ್ರೀ ವಿಶ್ವನಾಥ ರೆಡ್ಡಿ (ಪಶು ಸಂಗೋಪನಾ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು):—

ಅ) ಧಾರವಾಡ ಹಾಲಿನ ಡೈರಿಯಲ್ಲಿ ಹಾಲಿನ ವ್ಯವಹಾರ ನಡೆಸಲು ಈ ಕೆಳಗೆ ತಿಳಿಸಿದಂತೆ ಸಿಬ್ಬಂದಿ ಇದ್ದಾರೆ.

ಸರಕಾರಿ ನೌಕರರು :	58
ದಿನಗೂಲಿ ನೌಕರರು :	49
ಒಟ್ಟು :	107

ದಿನನಿತ್ಯದ ಹಾಲಿನ ಸಂಗ್ರಹಣೆ 15,892 ಲೀಟರುಗಳು.
ದಿನನಿತ್ಯದ ಹಾಲಿನ ವಿತರಣೆ 14,176.5 ಲೀ

ಆ)	1979-80	ರೂ. 5,51,650-53
	1980-81	ರೂ. 8,38,360-00
	1981-82	ರೂ. 11,62,815-77

ಇ) ಈ ಡೈರಿ ಪ್ರಾರಂಭವಾದಾಗ ವಾಹನಗಳನ್ನು ಖರೀದಿಸಿ ಹಾಲಿನ ಸಂಗ್ರಹಣೆ ಹಾಗೂ ವಿತರಣೆ

ಮಾಡಲಾಗುತ್ತಿದ್ದು. ಈ ವಾಹನಗಳನ್ನು ಉಪಯೋಗಿಸುತ್ತಿರುವುದರಿಂದ ಸಿಬ್ಬಂದಿ ವೆಚ್ಚ ವಾಹನ ನಿರ್ವಹಣೆ ವೆಚ್ಚಗಳು ಕ್ರಮೇಣ ಹೆಚ್ಚಾಗಿ ಉಳಿತಾಯವಾಗುವ ಬದಲು ನಷ್ಟವಾದುದರಿಂದ ಈ ವಾಹನಗಳನ್ನು ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿದ್ದಾಗ ಹರಾಜು ಮಾಡಿ ಹಾಲಿನ ಸಂಗ್ರಹಣೆ ಹಾಗೂ ವಿತರಣೆಗೆ ಬಾಡಿಗೆ ವಾಹನಗಳನ್ನು ಉಪಯೋಗಿಸಲಾಗುತ್ತಿದೆ. ಸರ್ಕಾರವೇ ವಾಹನಗಳನ್ನು ಖರೀದಿಸಿ ಹಾಲನ್ನು ಸಂಗ್ರಹಿಸಲು ಮತ್ತು ವಿತರಣೆ ಮಾಡಲು 13,57,800-00 ರೂಗಳು ವೆಚ್ಚವಾಗುತ್ತದೆ. ಬಾಡಿಗೆ ವಾಹನಗಳನ್ನು ಉಪಯೋಗಿಸಿದರೆ ಸರ್ಕಾರಕ್ಕೆ 10,88,430 ರೂಗಳು ವೆಚ್ಚವಾಗುತ್ತದೆ. ಬಾಡಿಗೆ ವಾಹನಗಳನ್ನು ಉಪಯೋಗಿಸುವುದರಿಂದ ಸರ್ಕಾರಕ್ಕೆ 2,69,370 ರೂಪಾಯಿಗಳು ಉಳಿತಾಯವಾಗುತ್ತದೆ. ಈ ಪದ್ಧತಿಯು ರಾಜ್ಯದ ಎಲ್ಲಾ ಸರ್ಕಾರಿ ಡೈರಿಗಳಲ್ಲಿಯೂ ಮತ್ತು ಕರ್ನಾಟಕ ಹೈನು ಅಭಿವೃದ್ಧಿ ನಿಗಮದಲ್ಲಿಯೂ ಜಾರಿಯಲ್ಲಿದೆ.

ಈ) ಬಾಡಿಗೆ ವಾಹನಗಳನ್ನು ಉಪಯೋಗಿಸುವುದರಿಂದ ಡೈರಿಗೆ ಆರ್ಥಿಕ ಹೊಣೆ ಹೆಚ್ಚಾಗಿರುವುದಿಲ್ಲ.

ಶ್ರೀ ಎಂ. ಜಿ. ಜರತಾರಗರ--ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಧಾರವಾಡ ಹಾಲಿನ ಡೈರಿಯಲ್ಲಿ ಹಾಲಿನ ವ್ಯವಹಾರ ನಡೆಸಲು ಸರ್ಕಾರಿ ನೌಕರರು 58, ದಿನಗೂಲಿ ನೌಕರರು 4, ಇದ್ದಾರೆಂದು ಹೇಳಿದಾರೆ. ಇವರು ಕಳೆದ 10--12 ವರ್ಷಗಳಿಂದ ಖಾಯಂ ದಿನಗೂಲಿ ಮೇಲೆ ದುಡಿಯುತ್ತಿದ್ದಾರೆ. ಹಿಂದೆ ಡೈರಕ್ಟರು ಇವರನ್ನು ಖಾಯಂ ಮಾಡುವುದಕ್ಕೆ ಒಪ್ಪಿಕೊಂಡಿದ್ದರು. ಆದ್ದರಿಂದ ಹಂತ ಹಂತವಾಗಿ ಇವರನ್ನು ಖಾಯಂ ಮಾಡುತ್ತೀರಾ ಮತ್ತು ಯಾವ ರೀತಿ ಖಾಯಂ ಮಾಡಲಿಕ್ಕೆ ಸಾಧ್ಯವಿದೆ ?

ಶ್ರೀ ವಿಶ್ವನಾಥರೆಡ್ಡಿ--ಶಶಿಶೀಲಿಸೋಣ.

ಶ್ರೀ ಎಂ. ಜಿ. ಜರತಾರಗರ--ನನ್ನ ಮೊದಲನೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ದಿನನಿತ್ಯದ ಹಾಲಿನ ಸಂಗ್ರಹಣೆ 15,892 ಲೀಟರುಗಳು, ದಿನನಿತ್ಯದ ಹಾಲಿನ ವಿತರಣೆ 14,176. 5 ಲೀಟರುಗಳು ಎಂದು ಹೇಳಿದ್ದಾರೆ. ರೈತರಿಂದ ಹಾಲು ಕೊಳ್ಳುವಾಗ ರಸೀದಿ ಒಂದು ರೀತಿ ಕೊಡುತ್ತಾರೆ. 4 ಆಣೆ. 6 ಆಣೆ, 8 ಆಣೆ ಹೀಗೆ ಕೊಡುವುದು, ಈ ರೀತಿ ಭ್ರಷ್ಟಾಚಾರ ನಡೆಯುತ್ತಾ ಇದ್ದಾರೆ. ಅದನ್ನು ನಿಲ್ಲಿಸುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವಿಶ್ವನಾಥರೆಡ್ಡಿ--ಆ ಬಗ್ಗೆ ಮಾನ್ಯ ಸದಸ್ಯರು ವಿವರವಾದಂಥ ಮಾಹಿತಿಯನ್ನು ಕೊಡಲಿ ; ಅದನ್ನು ನಾವು ಪರಿಶೀಲಿಸೋಣ.

ಶ್ರೀ ಎಂ. ಜಿ. ಜರತಾರಗರ--ಕಳೆದ 3 ವರ್ಷಗಳಲ್ಲಿ ದೊಡ್ಡ ಗುತ್ತಿಗೆಯನ್ನು ಲಾರಿ ಕಂಟ್ರಾಕ್ಟರಿಗೆ ಕೊಟ್ಟಿದೀರಿ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಂಟ್ರಾಕ್ಟರಿಗೆ ಬಾಡಿಗೆ ಕೊಟ್ಟು ಬಾಡಿಗೆ ವಾಹನಗಳ ಮೂಲಕ ಸಂಗ್ರಹಣೆ ಮತ್ತು ವಿತರಣೆ ಮಾಡುವ ಬದಲು ವಾಹನಗಳನ್ನು ಖರೀದಿಸಿ ಉಪಯೋಗಿಸುವುದು ಒಳ್ಳೆಯದಲ್ಲವೇನೇ, ಇದನ್ನು ಪರಾಮರ್ಶಿಸುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ--ನಾನು ಈಗಾಗಲೇ ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ವಾಹನಗಳನ್ನು ಖರೀದಿಸಿ ಹಾಲಿನ ಸಂಗ್ರಹಣೆ ಮತ್ತು ವಿತರಣೆ ಮಾಡಲು 13,57,800 ರೂಪಾಯಿಗಳು ವೆಚ್ಚವಾಗುತ್ತದೆ. ಬಾಡಿಗೆ ವಾಹನಗಳನ್ನು ಉಪಯೋಗಿಸುವುದರಿಂದ ಸರ್ಕಾರಕ್ಕೆ 10,88,430 ರೂಪಾಯಿಗಳು ವೆಚ್ಚವಾಗುತ್ತದೆ. ಬಾಡಿಗೆ ವಾಹನಗಳನ್ನು ಉಪಯೋಗಿಸುವುದರಿಂದ ಸರ್ಕಾರಕ್ಕೆ 2,69,370 ರೂಪಾಯಿಗಳು ಉಳಿತಾಯವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೇನೆ. ಬಾಡಿಗೆ ವಾಹನದವರು ಈ ಕೆಲಸವನ್ನು ಮಾಡುವುದರ ಜೊತೆಗೆ ಉಳಿದ ಕಾರ್ಯವನ್ನು ಸಹ ಮಾಡುತ್ತಾರೆ ; ಆದರಿಂದ ಅವರಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಖರ್ಚು ಉಳಿತಾಯವಾಗುತ್ತದೆ.

ಶ್ರೀ ಎಂ. ಜಿ. ಜರತಾರಗರ--ಈಗ ಬೆಂಗಳೂರಿನಲ್ಲಿ ಪ್ಲಾಸ್ಟಿಕ್ ಚೀಲಗಳಲ್ಲಿ ಹಾಲನ್ನು ವಿತರಣೆ ಮಾಡುತ್ತಾ ಇದ್ದಾರೆ. ಇದೇ ರೀತಿ ಧಾರವಾಡದಲ್ಲೂ ಮಾಡುವುದಕ್ಕೆ ಏನು ತೊಂದರೆಯಿದೆ.

ಶ್ರೀ ವಿಶ್ವನಾಥ ರೆಡ್ಡಿ--ಬಹುತೇಕ ಈ ಪ್ರಶ್ನೆಯಲ್ಲಿ ಅದು ಬರುವುದಿಲ್ಲ ; ಆದಾಗ್ಯೂ ಕೂಡ ಇದರ ಬಗ್ಗೆ ಆಲೋಚಿಸುತ್ತೇವೆ.

ಶ್ರೀ ಎಂ. ಜಿ. ಜರತಾರಗರ--ಈಗ ಅರ್ಧ ಭಾಗ ಬಾಟ್ಲಿಗಳಲ್ಲಿ ಹಾಲನ್ನು ವಿತರಣೆ ಮಾಡುತ್ತಾ ಇದ್ದಾರೆ. ಆದ್ದರಿಂದ ಪೂರ್ತಿಯಾಗಿ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ವಿತರಣೆ ಮಾಡುವುದನ್ನು ಕಾರ್ಯಾಚರಣೆಯಲ್ಲಿ ತರುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ--ಆ ಬಗ್ಗೆ ಆಲೋಚನೆ ಮಾಡೋಣ.

ಒಬ್ಬ ಸದಸ್ಯರು ಕರ್ನಾಟಕದಲ್ಲಿ 5 ಡೈರಿ ಕೇಂದ್ರಗಳಿವೆ. ಅದನ್ನು ಬಂದೇ ಕಾರ್ಪೊರೇಷನ್ ಮಾಡುವಂಥ ಉದ್ದೇಶ ಸರ್ಕಾರಕ್ಕೆ ಇವೆಯೇ ಮತ್ತು ಏಜೆಂಟರುಗಳನ್ನು ಪ್ರತಿವರ್ಷ ನವೀಕರಣ ಮಾಡುವ ಪದ್ಧತಿ ಸಹ ಇದೆಯೆ. ?

ಶ್ರೀ ವಿಶ್ವನಾಥರೆಡ್ಡಿ--ಬಹುತೇಕ ಇದು ಹುಬ್ಬಳ್ಳಿ--ಧಾರವಾಡಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.